ಬಾಯಿತಪ್ಪಿ ದುಡ್ಡಿನ ವಿಷಯ ತೆಗೆದಳೋ. ಅಂದು ಯುದ್ಧವೇ ಆಗುತ್ತಿತ್ತು. ಆಗೆಲ್ಲ ಅವಳ ಮನಃಪಟಲದಲ್ಲಿ ನಿಲ್ಲುವ ವ್ಯಕ್ತಿಯೆಂದರೆ ಲಕ್ಷ್ಮಣನೊಬ್ಬನೇ.

★★★

ಲಕ್ಷ್ಮಣ ತನ್ನದೇ ಊರಿನವ. ತನಗಿಂತ ಎರಡು ವರ್ಷ ದೊಡ್ಡವ. ಅವನು ಹೈಸ್ಕೂಲು ಸೇರಿದಾಗ ತಾನು ಆರನೇ ಇಯತ್ತೆ ಇರಬೇಕು. ತನ್ನ ಮನೆಗೆಲ್ಲ ಪರಿಚಿತ. ಶಾಲೆ ಕಾಲೇಜು ದಿನಗಳಲ್ಲೇ ಅವ ತನ್ನ ಚಿಕ್ಕಮ್ಮನ ಊರಿಗೆ ಓದಲು ಹೋಗಿ ಆಮೇಲಾಮೇಲೆ ತಮ್ಮ ಸಂಪರ್ಕವೂ ಕಡಿದು ಹೋಗಿತ್ತು. ಆಗೊಮ್ಮೆ ಈಗೊಮ್ಮೆ ಅಕ್ಕತಂಗಿಯರು ಹರಟೆ ಹೊಡೆಯುವಾಗ ಹಳೆ ಗೆಳೆಯ ಗೆಳತಿಯರನ್ನು ನೆನಪಿಸಿಕೊಳ್ಳುತ್ತಿದ್ದರು. ಲಕ್ಷ್ಮಣ ಅಲ್ಲಿದ್ದಾನಂತೆ, ಮದುವೆಯಾಯಿತಂತೆ... ಒಳ್ಳೇ ಸರಕಾರಿ ನೌಕರಿಯಾಗಿದೆಯಂತೆ... ಹೀಗೆ ವಿಷಯ ಹಾದುಹೋಗುತ್ತಿತ್ತು ಮಾತಿನ ಮಧ್ಯೆ. ಅಲ್ಲಿಗೆ ಸೀತೆ ಮರೆತುಬಿಡುತ್ತಿದ್ದಳು. ಈಗ ಕಳೆದ ಒಂದೆರಡು ವರ್ಷದಲ್ಲಿ ಮತ್ತೆ ಪರಿಚಯ ಸ್ನೇಹ ಮರುಕಳಿಸಿದೆ. ತನ್ನ ಕೆಲಸದ ನಿಮಿತ್ತ ಅವನೂ ಇದೇ ಊರಿಗೆ ವರ್ಗವಾಗಿ ಬಂದು ಐದಾರು ವರ್ಷಗಳಾದರೂ ಅವನಿಗೆ ಸೀತೆ ಇಲ್ಲಿದ್ದಾಳೆಂಬುದೇ ಗೊತ್ತಿರಲಿಲ್ಲ. ಅವಳ ಗಂಡ ದೇಶಾಂತರ ಹೊರಟುಹೋಗಿದ್ದೂ ಅವನಿಗೆ ಗೊತ್ತಿರಲಿಲ್ಲ. ಸೀತೆಯೂ ತಾನಾಗಿ ಬಾಯಿಬಿಟ್ಟಿರಲಿಲ್ಲ. ಊರಲ್ಲಿನ ಜನರಿಂದ ತಿಳಿದುಕೊಂಡ ದಿನ ಲಕ್ಷಣ ತುಂಬಾ ರೇಗಿದ್ದ. ಅವನ ಪರಿಚಯವಾಗಿದ್ದೂ ಇತ್ತೀಚೆಗೆ. ಯಾವುದೋ ಪುಸ್ತಕ ಪ್ರದರ್ಶನಕ್ಕೆ ಹೋದಾಗ ಅವನೂ ತನ್ನ ಮಗಳೊಂದಿಗೆ ಅಲ್ಲಿ ಬಂದಿದ್ದ. ಆಗಲೇ ಇಬ್ಬರೂ ಮತ್ತೆ ಹಳೇ ಗುರುತು ಸ್ನೇಹದಿಂದ ಮತ್ತೆ ಹತ್ತಿರವಾಗಿದ್ದರು. ಊರಿಗೆ ಹೋದರೆ ಅವ್ವ ಕಳಿಸಿದ ಸಿಹಿಯಿರಲಿ, ಬನ್ನಿ ರವೆಯಿರಲಿ, ಕಾರಾಸೇವು ಇರಲಿ ಅವಳಿಗೂ ತಪ್ಪದೇ ತಂದು ಕೊಡುತ್ತಿದ್ದ. ಇಲ್ಲಾ ಅಲ್ಲಿಂದಲೇ ಫೋನಾಯಿಸಿ 'ಏನಾದರೂ ಬೇಕೆ?' ಎಂದು ವಿಚಾರಿಸಿಕೊಳ್ಳುತ್ತಿದ್ದ. ಇಲ್ಲ, ಅವಳೇ ಸಲುಗೆಯಿಂದ 'ಅದನ್ನು ತಗೊಂಬಾರೋ, ಇದನ್ನು ತಗೊಂಬಾರೋ' ಎನ್ನುತ್ತಾಳೆ. ಅವನು ತಪ್ಪದೆ ನೆನಪಿನಿಂದ ತಂದುಕೊಡುತ್ತಾನೆ. ಗಡಿಬಿಡಿಯಲ್ಲಿ ತರಲಾಗದಿದ್ದರೆ ಮುಂದಿನ ಟೂರಿನಲ್ಲಿ ತಪ್ಪದೇ ತರುತ್ತಾನೆ. ಮನಸ್ಸಿಗೆ ಏನೇ ಚಿಂತೆ, ಬೇಜಾರು, ಸಮಸ್ಯೆಯಿದ್ದರೂ ಅವನೊಂದಿಗೆ ಹಂಚಿಕೊಂಡರೆ ಸೀತೆಗೂ ಸಮಾಧಾನವೆನಿಸುತ್ತಿತ್ತು. ಯಾಂತ್ರಿಕ ಬದುಕಿನ ಧಾವಂತದಲ್ಲಿ ಒಬ್ಬರಿಗೊಬ್ಬರು ಸಿಗುವುದೇ ಅಪರೂಪ. ಇನ್ನು ಫೋನಿನಲ್ಲಿ ಎಷ್ಟು ಮಾತಾಡಬಹುದು. ಆದರೆ ಕೆಲವೊಮ್ಮೆ ತುಂಬಾ ಬೇಸರವಾದಾಗ ಸೀತೆಗೆ ಲಕ್ಷ್ಮಣನೊಂದಿಗೆ ಕೂತು ಮಾತಾಡಿದರೆ ಚೆನ್ನ ಎನಿಸುತ್ತಿರುತ್ತದೆ. ಆದರೆ ಅವನಿಗೂ ತನ್ನದೇ ಕಚೇರಿ, ಮನೆ, ಮಕ್ಕಳ ಎಕ್ಸಾಮು, ನೆಂಟರು ಬಂದಿದ್ದಾರೆ ಎಂಬ ಕಾರಣಗಳಲ್ಲಿ ಒಂದಲ್ಲ ಒಂದು ಮುಂದಾಗಿ ಭೇಟಿಯಾಗಲೂ ಸಮಯ ಸಿಗುತ್ತಿರಲಿಲ್ಲ. ಲಕ್ಷ್ಮಣನಿಗೂ ಅಷ್ಟೇ, ಸೀತೆಯನ್ನು ಕಾಣಬೇಕು ಅನ್ನುವ ಹಂಬಲ. ಆದರೆ ಮುಖ್ಯವಾಗಿ ಇಬ್ಬರಿಗೂ ಸಮಯವಿಲ್ಲ.

ಮತ್ತೊಮ್ಮೆ ತನ್ನ ಗೆಳತಿಯೊಂದಿಗೆ ನಾಟಕ ನೋಡಲು ಹೋದಾಗ ಅಕಸ್ಮಾತ್ ತನ್ನ ಗೆಳೆಯನ ಒತ್ತಾಯಕ್ಕೆ ಲಕ್ಷ್ಮಣನೂ ಬಂದಿದ್ದ. ಸಾಹಿತ್ಯ ಗೀಹಿತ್ಯ ಅವನಿಗರ್ಥವಾಗದು. ಅದರಲ್ಲಿ ರುಚಿಯೂ ಇಲ್ಲ. ಸೀತೆಯನ್ನು ನೋಡಿ ಇಲ್ಲದ ಖುಷಿ. ಇಲ್ಲೇ ಬಾ ಕೂರೋಣ ಎಂದು ಅವಳನ್ನು ಗೆಳೆಯನಿಗೆ ಪರಿಚಯಿಸಿ ಒಟ್ಟಿಗೆ ನಾಟಕ ನೋಡಿದರು. ಏಸೋ ವರ್ಷಗಳ ನಂತರ ಹೀಗೆ ಕೂತು ಮಾತಾಡುವ ಅವಕಾಶ ಸಿಕ್ಕಿತ್ತು. ಆದರೆ ಇಬ್ಬರ ಹರಟೆಯಲ್ಲಿ ಗುಸುಗುಸು ಪಿಸುಪಿಸು ಮಾತುಗಳಲ್ಲಿ ನಾಟಕವೇ ಅರ್ಥವಾಗಿರಲಿಲ್ಲ. ರಾತ್ರಿ ಎಂಟು ಗಂಟೆಗೆ ಮೆಟ್ರೊ